ಮಂತ್ರಿಯವರಿಂದ ಹೇಳಿಕೆ

ಸೆಷನ್ ಕೋರ್ಟ್ ಜಡ್ಜ್‌ಮೆಂಟ್ ಬಗ್ಗೆ perverse ಎಂದು ಹೇಳಿರುವ ಬಗ್ಗೆ ವಿವರಣೆ.

ಶ್ರೀ ಎಸ್. ಆರ್. ಬೊಮ್ಮಾಯಿ.—ಅಧ್ಯಕ್ಷರೇ, ನಾನು ಒಂದು ವಿವರಣೆಯನ್ನು ಈ ಮೂಲಕ ಕೊಡಬಯಸುತ್ತೇನೆ. ನಿನ್ನೆ ಈ ಮನೆಯಲ್ಲಿ ಮಾನ್ಯ ಜಾಲಪ್ಪನವರ ರಾಜೀನಾಮೆ ಬಗ್ಗೆ ಚರ್ಚೆ ನಡೆಯುತಕ್ಕಂತಹ ಕಾಲದಲ್ಲಿ ಸೆಷನ್ಸ್ ಕೋರ್ಟ್ ಜಡ್ಜ್‌ಮೆಂಟ್ ಬಗ್ಗೆ ಮಾನ್ಯ ಮುಖ್ಯ ಮಂತ್ರಿಗಳು ಸ್ಟ್ರೇಂಜ್ ಎಂದು ಹೇಳಿದರು. ಆಗ ನಾನು ಎದ್ದು ಅಪಲೇಟ್ ಕೋರ್ಟ್‌ನಲ್ಲಿ perverse'' ಎಂದು ಕರೆಯುತ್ತಾರೆಂದು ಹೇಳಿದೆ ಅದು ಅನ್‌ಪಾರ್ಲಿಮೆಂಟರಿ ಅಲ್ಲ. ಕೆಲವು ಪತ್ರಿಕೆಗಳಲ್ಲಿ ಈ ಬಗ್ಗೆ ಪ್ರಕಟವಾಗಿದೆ. ಕೆಲವು ಪತ್ರಿಕೆಗಳಲ್ಲಿ ಇದನ್ನು ಸರಿಯಾಗಿ ಗ್ರಹಿಸಿ ವರದಿ ಮಾಡಿದ್ದಾರೆ. ಕೆಲವು ಪತ್ರಿಕೆಗಳಲ್ಲಿ ''ಹುಚ್ಚು ಜಡ್ಜ್‌ಮೆಂಟ್'' ಎಂದು ಹೇಳಿರುವುದಾಗಿ ಹೇಳಿದ್ದಾರೆ. Perverse ಎಂದು ನಾವು ಹೇಳುತ್ತೇವೆಂದು ನಾನು ಹೇಳಿದೆ. ನನ್ನ ಅಭಿಪ್ರಾಯದಲ್ಲಿ perverse ಎಂದರೆ ಹುಚ್ಚು ಅಲ್ಲ, ಅಸಂಬದ್ಧ ಎಂದು. It has got its own legal connotation. ನಾವು ಇದನ್ನು ಅನೇಕ ಸಲ ಹೇಳಿದ್ದೇವೆ ಬೇಕಾದಷ್ಟು ಸಲ ಹೇಳಿದ್ದೇವೆ. ಮಹಾರಾಷ್ಟ್ರ ಸಭೆಯಲ್ಲಿ ಲೆಂಟಿನ್ ಜಡ್ಜ್‌ಮೆಂಟ್ ಬಗ್ಗೆ ಎಂಡು ದಿನ ಚರ್ಚೆ ಆಯಿತು. ಯಾರು ಮಂತ್ರಿ ಆಗಿದ್ದರು ಅವರು ಕೂಡಾ ಈ ಬಗ್ಗೆ ಬೇಕಾದಷ್ಟು ಹೇಳಿದ್ದಾರೆ. ಅದು ಬೇರೆ ವಿಚಾರ. ಇಲ್ಲಿ ಸರಿಯಾಗಿ ವರದಿ ಆಗಿಲ್ಲ. ಅದನ್ನು ಅವರು ತಿದ್ದುಕೊಳ್ಳಬೇಕೆಂದು ನಾನು ಹೇಳುತ್ತೇನೆ. ಈ ಅಪಲೇಟ್ ಕೋರ್ಟ್ ಜಡ್ಜ್‌ಮೆಂಟ್ ಸ್ಟ್ರೇಂಜ್ ಎಂದಾಗ perverse ಎಂದು ಹೇಳಿದ್ದು ಅನ್‌ಪಾರ್ಲಿಮೆಂಟರಿ ಆಗುವುದಿಲ್ಲ.

ನಿಯಮ ೩೩ಳಿರ ಮೇರೆಗೆ

1) ಕುಂದಾಪುರದಲ್ಲಿ ಅಪಲೇಟ್ ಟ್ರಿಬ್ಯೂನಲ್ ಕಾರ್ಯಾರಂಭ ಮಾಡುವ ಬಗ್ಗೆ

ಶ್ರೀ ಜಿ. ಎಸ್. ಆಚಾರ್.—ಕರ್ನಾಟಕ ಭೂ ಸುಧಾರಣಾ ಶಾಸನಕ್ಕೆ ತಿದ್ದುಪಡಿ ಆಗ್ಕಿ ಭೂನ್ಯಾಯ ಮಂಡಳಿಗಳ ತೀರ್ಪುಗಳ ಮೇಲೆ ನೇರವಾಗಿ ಹೈಕೋರ್ಟಿಗೆ ಹೋಗುವ ಬದಲು ಅಪೀಲು ಪ್ರಾಧಿಕಾರ (ಅಪಿಲೇಟ್ ಟ್ರಿಬ್ಯುನಲ್)ಗಳಿಗೆ ಮೇಲ್ಮನವಿಗೆ ಅವಕಾಶ ಕಲ್ಪಿಸಲಾಯಿತು. ದಕ್ಷಿಣ ಕನ್ನಡ ಜಿಲ್ಲೆಯ ಕುಂದಾಪುರ ಮತ್ತು ಕಾರ್ಕಳ ತಾಲ್ಲೂಕುಗಳಿಗೆ ವ್ಯಾಪ್ತಿ ಉಳ್ಳ ಕುಂದಾಪುರ ಅಪಿಲೇಟ್ ಟ್ರಿಬ್ಯುನಲ್ ರಚಿಸಿ ಒಂದು ವರ್ಷಕ್ಕೂ ಮಿಗಿದೆ, ಅಧಿಕಾರಿಗಳ ನೇಮಕ ಆಗಿದೆ. ಆದರೆ ಟ್ರಿಬ್ಯುನಲ್ ಕಾರ್ಯಾರಂಭ ಮಾಡಿಲ್ಲ. ಕಾರಣ, ಕಟ್ಟಡ ಸಿಕ್ಕಿಲ್ಲ ಎಂಬ ಸುದ್ದಿ, ಸಾಕಷ್ಟು ಸ್ಥಳಾವಕಾಶ ಇರುವ ಕಟ್ಟಡಗಳು ಕುಂದಾಪುರದಲ್ಲಿ ಲಭ್ಯ ಇದ್ದರೂ ಇನ್ನೂ ವಿಳಂಬವೇಕೆ ? ಬಾಡಿಗೆ ನಿರ್ಧರಿಸಿ, ಪ್ರಾಧಿಕಾರದ ಕಾರ್ಯ ಆರಂಭಿಸಲು ಏನು ತೊಂದರೆ ? ಈ ವಿಳಂಬದ ಹಿಂದೆ ಯಾವ ಶಕ್ತಿಗಳ ಕೈವಾಡವಿದೆಯೋ ಎಂದು ಬಡ ರೈತರು ಭಯ ಪಡುವಂತಾಗಿದೆ. ಭೂನ್ಯಾಯ ಮಂಡಳಿ ತೀರ್ಮಾನದಲ್ಲಿ ಅನ್ಯಾಯವಾದಲ್ಲಿ ಈ ಅಪಿಲೇಟ್ ಟ್ರಿಬ್ಯುನಲ್‌ನಲ್ಲಿ ರಕ್ಷಣೆ ತಕ್ಷಣ ಸಿಗಬೇಕು. ಇದರಲ್ಲಿ ಲೇಟಾದರೆ ಬಡವರ ಬದುಕಿಗೆ ಏಟು ಆಗುತ್ತದೆ. ಈಗಾಗಲೇ ಜನ ಅಪಿಲೇಟ್ ಟ್ರಿಬ್ಯುನಲ್ ಈಗ 'ಲೇಟ್ ಟ್ರಿಬ್ಯುನಲ್' ಆಗಿದೆ ಎನ್ನುತ್ತಿದ್ದಾರೆ. ಸೂಕ್ತ ಕ್ರಮ ಕೈಗೊಂಡು ತಕ್ಷಣ ಕಾರ್ಯಾರಂಭ ಮಾಡುವಂತೆ ಸರ್ಕಾರವನ್ನು ಒತ್ತಾಯಿಸುತ್ತೇನೆ.

ಶ್ರೀ ಎಸ್. ಆರ್. ಬೊಮ್ಮಾಯಿ.—ದಕ್ಷಿಣ ಕನ್ನಡ ಜಿಲ್ಲೆಯ ಕುಂದಾಪುರದಲ್ಲಿ ಸ್ಥಾಪಿಸಿರುವ ಅಧಿಕ ಭೂಸುಧಾರಣೆ ಮೇಲ್ಮನವಿ ಪ್ರಾಧಿಕಾರ ಕಛೇರಿಗೆ ಸರ್ಕಾರಿ ಕಟ್ಟಡ ದೊರೆತಿರಲಿಲ್ಲವಾದ ಕಾರಣ. ಖಾಸಗಿ ಕಟ ಡದಲ್ಲಿ ಕಛೇರಿಯನ್ನು ಪ್ರಾರಂಭಿಸಲು ಸರ್ಕಾರವು ಅನುಮತಿ ನೀಡಲಾಗಿ, ಶ್ರೀಮತಿ ವಿನ್ನಿ ಫ್ರೆಡ್ ಫರ್ನಾಂಡಿಸ್ ಎಂಬುವರ ಖಾಸಗಿ ಕಟ್ಟಡ ದೊರಕಿದ್ದು, ಇದಕ್ಕೆ ಸರ್ಕಾರವು ತನ್ನ ಒಪ್ಪಿಗೆ ನೀಡಿ, ಸದರಿ ಸ್ಥಳದಲ್ಲಿ ಈ ಪ್ರಾಧಿಕಾರವು ತನ್ನ ಕಛೇರಿಯನ್ನು ಕೂಡಲೇ ಪ್ರಾರಂಭಿಸುವಂತೆ ಈಗಾಗಲೇ ಆದೇಶ ನೀಡಿದೆ. ಈಗಾಗಲೇ ಬಾಡಿಗೆ ಕಟ್ಟಡ ತೆಗೆದುಕೊಂಡಿದ್ದೇವೆ, ಅವಕ್ಕೆ ಸರ್ಕಾರ ಒಪ್ಪಿಗೆ ಕೊಟ್ಟಿದೆ. ಕಟ್ಟಡ ತೆಗೆದುಕೊಳ್ಳುವುದಕ್ಕೆ ಮೊದಲು ತೊಂದರೆಯಾಯಿತು, ಕೂಡಲೇ ಕೆಲಸ ಪ್ರಾರಂಭ ಮಾಡುತ್ತೇವೆ